# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | :292 |
| ಸದಸ್ಯರ ಹೆಸರು | :ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಮಾನ್ಯ ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | :11.12.2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿ ಮತ್ತು ಇತರೆ ಕಛೇರಿಗಳ ಕಾಮಗಾರಿ 2013 ರಲ್ಲಿ ಪ್ರಾರಂಭಗೊಂಡು 11 ವರ್ಷ ಕಳೆದರೂ ಇನ್ನೂ ಕಾಮಗಾರಿ ಪೂರ್ಣಗೊಳ್ಳದೇ ಇರಲು ಕಾರಣಗಳೇನು; | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು ಅಳಪೆ ಗ್ರಾಮದ ಸರ್ವೆ ನಂ.23/6ಎ2ಬಿ, 23/4ಬಿ, 23/12ಬಿ, 23/6ಬಿ ಹಾಗೂ 23/3ರ ಪೈಕಿ ಒಟ್ಟು 5.89 ಎಕರೆ ಜಮೀನಿನಲ್ಲಿ ಪ್ರಜಾಸೌಧ, ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರ (ಜಿಲ್ಲಾ ಆಡಳಿತ ಕಛೇರಿ ಸಂಕೀರ್ಣ) ಕಟ್ಟಡವನ್ನು ರೂ.41.00 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸುವ ಸಲುವಾಗಿ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ:ಕಂಇ 87 ಡಬ್ಲ್ಯೂಬಿಆರ್ 2011 ದಿನಾಂಕ:28-04-2015 ರಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>• ಸದರಿ ಕಾಮಗಾರಿಯ ಟೆಂಡರ್‌ಗೆ ದಿನಾಂಕ:18-04-2016 ರಂದು ಅನುಮೋದನೆ ನೀಡಿ ದಿನಾಂಕ::02-05-2016 ರಂದು ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಲಾಗಿತ್ತು.<br>• ಶ್ರೀಮತಿ. ಸುಮಾ. ಆರ್. ನಾಯಕ್ ಎನ್ನುವವರು ಉದ್ದೇಶಿತ ಕಾಮಗಾರಿ ಸ್ಥಳದಲ್ಲಿ ಗಿಡಮರಗಳು ಇರುವುದರಿಂದ ಸದರಿ ಗಿಡಮರಗಳನ್ನು ಕಟಾವು ಮಾಡಬಾರದೆಂದು ಆಕ್ಷೇಪಿಸಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಲಯ(NGT), ಚೆನ್ನೈ ಇಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣ ಇತ್ಯರ್ಥವಾಗುವವರೆಗೂ ಕಾಮಗಾರಿಯನ್ನು ಪ್ರಾರಂಭಿಸದಂತೆ ಮಾನ್ಯ ನ್ಯಾಯಾಲಯವು ದಿ: 30-09-2016 ರಂದು ತಡೆಯಾಜ್ಞೆ ನೀಡಲಾಗಿತ್ತು.<br>• ದಿ:20-12-2017 ರಂದು ಶ್ರೀಮತಿ. ಸುಮಾ ಆರ್. ನಾಯಕ್ ಇವರು ಸಲ್ಲಿಸಿದ್ದ ಅರ್ಜಿಯು ವಜಾಗೊಂಡಿದ್ದರಿಂದ, ದಿನಾಂಕ: 02-02-2018 ರಂದು ನಿಯಮಾನುಸಾರ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು, ದಿ:03-02-2018 ರಂದು ಕಾಮಗಾರಿಯನ್ನು ಪ್ರಾರಂಭಿಸಲು ಕಾರ್ಯಾದೇಶವನ್ನು ನೀಡಲಾಗಿತ್ತು.<br>• **ಕಾಮಗಾರಿ ವಿಳಂಬಕ್ಕೆ ಕಾರಣಗಳು :** ಮಾನ್ಯ NGT ನ್ಯಾಯಾಲಯದಿಂದ ತಡೆಯಾಜ್ಞೆ ತೆರವು (ಸುಮಾರು 2 ವರ್ಷಗಳು), ಉದ್ದೇಶಿತ ಸ್ಥಳದಲ್ಲಿದ್ದ ವಸತಿ ಗೃಹಗಳನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ ಇವರಿಂದ ತೆರವುಗೊಳಿಸುವಲ್ಲಿನ ವಿಳಂಬ, ಕಾಮಗಾರಿಯ |

| | | |
|---|---|---|
| | | ಪ್ರಗತಿಯ ಸಮಯದಲ್ಲಿ ಉಪಯೋಗಿತ ಇಲಾಖೆಯಿಂದ ಅಗತ್ಯತೆಗನುಸಾರವಾಗಿ ಕಟ್ಟಡದ ನಕ್ಷೆಯಲ್ಲಿ ಬದಲಾವಣೆ, ಮಳೆಗಾಲದಲ್ಲಿ ಕಟ್ಟಡದ ಅಡಿಪಾಯದ ಕಾಮಗಾರಿ ನಿರ್ವಹಿಸಲು ಹೆಚ್ಚಿನ ಸಮಯ ತಗಲಿರುವುದು, ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ಅನುದಾನ ಬಿಡುಗಡೆಯಲ್ಲಿ ಉಂಟಾದ ವಿಳಂಬ, ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಲಾಕ್‌ಡೌನ್ ಜಾರಿಯಾಗಿ ಕಾಮಗಾರಿಯ ಪ್ರಗತಿಯು ಕುಂಠಿತವಾಗಿದ್ದು, ಕಾಮಗಾರಿಯ ಏರಿಳಿತ ಪಟ್ಟಿ(Workslip)ಗೆ ಅನುಮೋದನೆ ನೀಡುವಲ್ಲಿನ ವಿಳಂಬ, ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ 2ನೇ ಬಾರಿಗೆ ಲಾಕ್‌ಡೌನ್ ಜಾರಿಯಾಗಿರುವುದು.<br>• ಈ ಮೇಲಿನ ಕಾರಣಗಳಿಂದಾಗಿ ಪ್ರಜಾಸೌಧ, ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರ (ಜಿಲ್ಲಾ ಆಡಳಿತ ಕಛೇರಿ ಸಂಕೀರ್ಣ) ಕಟ್ಟಡದ ಕಾಮಗಾರಿಯಲ್ಲಿ ವಿಳಂಬವಾಗಿರುತ್ತದೆ.<br>• ಪ್ರಸ್ತುತ ಮೊದಲನೇ ಹಂತದ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಅಶೋಕ ಸ್ತಂಭ ಅಳವಡಿಕೆ, ಲಿಫ್ಟ್‌ಅನ್ನು ಅಳವಡಿಸಿದ್ದು, ಲಿಫ್ಟ್ ಅನ್ನು ಉಪಯೋಗಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು, ಕಟ್ಟಡವನ್ನು ಸ್ವಚ್ಛಗೊಳಿಸುವ ಕಾಮಗಾರಿಗಳು ಬಾಕಿ ಇದ್ದು ಸುಮಾರು 01 ತಿಂಗಳೊಳಗಾಗಿ ಮೊದಲನೇ ಹಂತದ ಕಾಮಗಾರಿಯು ಪೂರ್ಣಗೊಳ್ಳುವುದು.<br><br>ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಮಂಗಳೂರು ಇವರು ಪ್ರಜಾಸೌಧ, ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರದ (ಜಿಲ್ಲಾ ಆಡಳಿತ ಕಛೇರಿ ಸಂಕೀರ್ಣ) ಎರಡನೇ ಹಂತದ ಕಾಮಗಾರಿಯನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಲು ರೂ.20.00 ಕೋಟಿ ಅನುದಾನ ಬಿಡುಗಡೆ ಮಾಡಿರುತ್ತಾರೆ. |
| ಆ) | ಕಟ್ಟಡದ ಪ್ರಾರಂಭಿಕ ವೆಚ್ಚ ಎಷ್ಟು; ಪ್ರಸ್ತುತ ತಗಲುವ ಅಂದಾಜು ವೆಚ್ಚ ಎಷ್ಟು; ಈ ಕಾಮಗಾರಿ ವಿಳಂಬದಿಂದ ಉಂಟಾದ ನಷ್ಟ ಎಷ್ಟು; ಇದಕ್ಕೆ ಯಾರನ್ನು ಜವಬ್ದಾರಿಯನ್ನಾಗಿ ಮಾಡಲಾಗಿದೆ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಪ್ರಜಾಸೌಧ, ಜಿಲ್ಲಾಡಳಿತ ಕೇಂದ್ರ ಕಟ್ಟಡದ ಮೊದಲ ಹಂತದ ನಿರ್ಮಾಣ ಕಾಮಗಾರಿಗಳಿಗೆ ನಿಗದಿಪಡಿಸಲಾದ ಮೊತ್ತ ರೂ.41.00 ಕೋಟಿಗಳು.<br><br>ಕಟ್ಟಡದ ಅವಶ್ಯಕತೆಗನುಣವಾಗಿ ನಕ್ಷೆಯಲ್ಲಿ ಬದಲಾವಣೆ, ಕಟ್ಟಡ ಜಾಗವು ಭೂಕಂಪನದ ಪ್ರದೇಶ ಬದಲಾವಣೆ ಸೇರಿದಂತೆ ಕಾಮಗಾರಿ ಪ್ರಗತಿಯ ಸಮಯದಲ್ಲಿ ಅವಶ್ಯಕವಿದ್ದ ಹೆಚ್ಚುವರಿ ಕಾಮಗಾರಿಗಳ ನಿರ್ವಹಣೆಯಿಂದ ಕಾಮಗಾರಿಯ ಯೋಜನಾ ಮೊತ್ತವು ರೂ.41.00ಕೋಟಿಯಿಂದ ರೂ.55.00 ಕೋಟಿಗಳಿಗೆ ಹೆಚ್ಚುವರಿಯಾಗಿದ್ದು ಸದರಿ ಹೆಚ್ಚುವರಿ ಮೊತ್ತಕ್ಕೆ ಸರ್ಕಾರದ ಆದೇಶ ಸಂಖ್ಯೆ ಕಂಇ 87 ಡಬ್ಲ್ಯೂಬಿಆರ್ 2011 ದಿ:16-07-2021 ರಂತೆ ಅನುಮೋದನೆಗೊಂಡಿರುತ್ತದೆ. |

<table>
<tr>
<td>ಇ)</td>
<td>ಜಿಲ್ಲಾಧಿಕಾರಿ ಕಛೇರಿ ಸಂಕೀರ್ಣದಲ್ಲಿ ಇತರೆ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿದ್ದು, ಆ ಇಲಾಖೆಗಳಿಂದ ಕಟ್ಟಡದ ಖರ್ಚನ್ನು ಪಡೆಯಲಾಗಿದೆ; (ಪಡೆದಿದ್ದಲ್ಲಿ ಅದರ ವಿವರ ನೀಡುವುದು)</td>
<td>ಪ್ರಜಾಸೌಧ, ಜಿಲ್ಲಾಡಳಿತ ಕೇಂದ್ರ ಕಟ್ಟಡದಲ್ಲಿ ಸ್ಥಳಾವಕಾಶ ಕಲ್ಪಿಸಿರುವ ಇತರೆ ಇಲಾಖೆಗಳಿಂದ ಕ್ರೋಢೀಕರಿಸಿರುವ ಮೊತ್ತ ಈ ಕೆಳಕಂಡಂತಿದೆ.
<table>
<tr><td>1</td><td>ಜಿಲ್ಲಾ ಅಂತರ್ಜಲ ಇಲಾಖೆ</td><td>ರೂ.30,60,000</td></tr>
<tr><td>2</td><td>ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ</td><td>ರೂ.52,35,000</td></tr>
<tr><td>3</td><td>ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ</td><td>ರೂ.57,00,000</td></tr>
<tr><td>4</td><td>ಪ್ರವಾಸೋದ್ಯಮ ಇಲಾಖೆ</td><td>ರೂ.39,60,000</td></tr>
<tr><td>5</td><td>ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ</td><td>ರೂ.25,80,000</td></tr>
<tr><td></td><td>ಒಟ್ಟು ರೂ.</td><td>2,05,35,000</td></tr>
</table>
</td>
</tr>
<tr>
<td>ಈ)</td>
<td>ಎಷ್ಟು ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ; ಇದರಿಂದ ಉಂಟಾಗಿರುವ ನಷ್ಟ ಎಷ್ಟು?</td>
<td>ಉದ್ದೇಶಿತ ಜಿಲ್ಲಾಧಿಕಾರಿಯವರ ಕಛೇರಿಯ ಆಡಳಿತ ಕೇಂದ್ರ ಕಟ್ಟಡದಲ್ಲಿ ಸ್ಥಳಾವಕಾಶ ಒದಗಿಸಲಾಗಿರುವ ಇಲಾಖೆಗಳ ಪೈಕಿ ಈ ಕೆಳಕಂಡ ಇಲಾಖೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ.
<table>
<tr><td>01</td><td>ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ</td></tr>
<tr><td>02</td><td>ಗಣಿ ಮತ್ತು ಭೂವಿಜ್ಞಾನ ಇಲಾಖೆ</td></tr>
<tr><td>03</td><td>ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ</td></tr>
<tr><td>04</td><td>ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ</td></tr>
<tr><td>05</td><td>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ</td></tr>
<tr><td>06</td><td>ಪ್ರವಾಸೋದ್ಯಮ ಇಲಾಖೆ</td></tr>
<tr><td>07</td><td>ಜಿಲ್ಲಾ ವಿಮಾ ಕಛೇರಿ</td></tr>
<tr><td>08</td><td>ಜಿಲ್ಲಾ ಅಂತರ್ಜಲ ಇಲಾಖೆ</td></tr>
<tr><td>09</td><td>ಜಿಲ್ಲಾ ರಿಜಿಸ್ಟ್ರಾರ್ ಮತ್ತು ಸಹಕಾರ ಸಂಘಗಳು</td></tr>
<tr><td>10</td><td>'ಡಿ' ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ</td></tr>
<tr><td>11</td><td>ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ</td></tr>
</table>
</td>
</tr>
</table>

**ಕಂಇ 122 ಡಬ್ಲ್ಯೂಬಿಆರ್ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು